**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಅಫಜಲಪೂರ.**

**ಸಿ.ಸಿ.ನಂ.287/2017**

ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ್ ಠಾಣೆ

-:ವಿರುದ್ದ:-

ಆರೋಪಿ/ತರುಃ ಸೈಪನ ತಂದೆ ರಕ್ಮೋದ್ದಿನ್ ಬಂದರವಾಡ,
46 ವರ್ಷ, ಉಃ ಚಾಲಕ, ವಾಸಃ ಜವಳಿ (ಡಿ) ಗ್ರಾಮ,
ತಾಃ ಆಳಂದ, ಜಿಃ ಕಲಬುರಗಿ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿತನ ಹೇಳಿಕೆಗಳು**

ಪ್ರಃ1: ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ

ಪ್ರಃ 2 ಪ್ರಾಸಾ-01 ಶರಣಪ್ಪ ಗೌಂಡಿ ತಂದೆ ಪೀರಪ್ಪ, ಇವರು ತಮ್ಮ ಸಾಕ್ಷ್ಯದಲ್ಲಿ ಮೃತ ಕಸ್ತೂರಿಬಾಯಿ ತನ್ನ ಸೋದರ ಅತ್ತೆ, ಚಾಸಾ-7, 8 ತನ್ನ ಸಂಬಂಧಿಕರು. ಈಗ್ಗೆ 1 ವರ್ಷದ ಹಿಂದೆ ದೇವರ ಕಾರ್ಯಕ್ರಮಕ್ಕೆಂದು ತಾನು ಹಾಗೂ ಮೃತ ಕಸ್ತೂರಿಬಾಯಿ ಮೋಟಾರ್ ಸೈಕಲ್ ಎಂಹೆಚ್-13/ಬಿಜೆ-0609 ರಲ್ಲಿ ಮಾಶಾಳದಿಂದ ಹೈದ್ರಾ ಗ್ರಾಮಕ್ಕೆ ಹೋಗುತ್ತಿದ್ದಾಗ, ಹಿಪ್ಪರಗಿಯವರ ಜಮೀನಿನ ಹತ್ತಿರ ಮುಂಜಾನೆ 11-00 ಗಂಟೆ ಸಮಯದಲ್ಲಿ ಮೂತ್ರ ವಿಸರ್ಜನೆಗೆಂದು ವಾಹನ ನಿಲ್ಲಿಸಿ ತನ್ನ ಅತ್ತೆಯನ್ನು ಅಲ್ಲೇ ಬಿಟ್ಟು ಹೋಗಿದ್ದು, ಸದರಿ ಆರೋಪಿತನು ಮಾಶಾಳ ಕಡೆಯಿಂದ ಲಾರಿಯನ್ನು ಅವಳ ಮೇಲೆ ಹರಿದು ಅಪಘಾತಪಡಿಸಿರುತ್ತಾನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 3 ಪ್ರಾಸಾ-01 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸದರಿ ಅಪಘಾತದಲ್ಲಿ ತನ್ನ ಅತ್ತೆಯ ಎಡಕಾಲಿನ ಮೇಲೆ ತೀವ್ರ ಸ್ವರೂಪದ ಗಾಯ ಹಾಗೂ ತಲೆಗೆ ಜೋರಾಗಿ ಪೆಟ್ಟಾಗಿ ಚಿಕಿತ್ಸೆಗೆಂದು ಸೋಲಾಪೂರಕ್ಕೆ ಕರೆದುಕೊಂಡು ಹೋಗುತ್ತಿದ್ದಾಗ ಮಾರ್ಗಮಧ್ಯದಲ್ಲಿ ಅಕ್ಕಲಕೋಟ ವ್ಯಾಪ್ತಿಯಲ್ಲಿ ಮೃತಪಟ್ಟಿರುತ್ತಾಳೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 4 ಪ್ರಾಸಾ-01 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಅಪಘಾತಪಡಿಸಿದ ಲಾರಿ ಹಾಗೂ ತಮ್ಮ ಮೋಟಾರ್ ಸೈಕಲಿನ ಭಾವಚಿತ್ರ ನೋಡಿ ಗುರುತಿಸಿದ್ದು ಅವುಗಳನ್ನು ನಿಶಾನೆ ಪಿ-1 ರಿಂದ 8

ಎಂದು ಗುರುತಿಸಲಾಯಿತು. ತಮ್ಮ ಮೃತ ಅತ್ತೆಯ ದಿನಕರ್ಮಗಳನ್ನು ಮಾಡಿ 8-10 ದಿವಸಗಳ ನಂತರ ಸದರಿ ಆರೋಪಿತನ ವಿರುದ್ದ ಪ್ರಕರಣ ದಾಖಲಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 5 ಪ್ರಾಸಾ-01 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸದರಿ ಘಟನೆಯ ದಿವಸ ಲಾರಿಯನ್ನು ಸದರಿ ಆರೋಪಿ ಸೈಪನ್ ಎಂಬ ವ್ಯಕ್ತಿ ಚಲಿಸುತ್ತಿದ್ದ ಎಂದು ಠಾಣೆಗೆ ಪ್ರಕರಣ ದಾಖಲಿಸಿದ ನಂತರ ಗೊತ್ತಾಗಿರುತ್ತದೆ. ಪ್ರಕರಣ ದಾಖಲಿಸಿದ ಮರುದಿವಸ ತಾನು ತೋರಿಸಿದ ಘಟನಾ ಸ್ಥಳವನ್ನು ಚಾಸಾ-4 ಮತ್ತು 5 ರವರ ಸಮಕ್ಷಮ ಪಂಚನಾಮೆ ಮಾಡಿ, ಸ್ಥಳದಿಂದ ವಾಹನಗಳನ್ನು ಜಪ್ತಿಪಡಿಸಿಕೊಂಡಿರುತ್ತಾರೆಂದು ಹಾಗೂ ಸದರಿ ಅಪಘಾತವು ಆರೋಪಿತನ ತಪ್ಪಿನಿಂದಲೇ ಆಗಿರುತ್ತದೆ. ಘಟನೆ ಕುರಿತು ಹಾಗೂ ಆರೋಪಿತನ ಹೆಸರು, ವಿಳಾಸ ಕುರಿತು ಮರು ಹೇಳಿಕೆ ನೀಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 6 ಪ್ರಾಸಾ-02 ಶಿವಾನಂದ ತಂದೆ ಸೋಮಲಿಂಗ ಪ್ರಧಾನಿ, ಇವರು ತಮ್ಮ ಸಾಕ್ಷ್ಯದಲ್ಲಿ ಮೃತ ಕಸ್ತೂರಿಬಾಯಿ ಹಾಗೂ ಚಾಸಾ-1 ರವರ ಹಾಗೂ ಆರೋಪಿತನ ಪರಿಚಯವಿದೆ. ಈಗ್ಗೆ 2 ವರ್ಷ 4-ತಿಂಗಳ ಹಿಂದೆ ಚಾಸಾ-1 ತನ್ನ ಅತ್ತೆಯಾದ ಕಸ್ತೂರಿಬಾಯಿಯನ್ನು ಕರೆದುಕೊಂಡು ಮಣ್ಣೂರ ಗ್ರಾಮಕ್ಕೆ ಹೋಗುತ್ತಿದ್ದಾಗ, ಮಾಶಾಳ ಹೈದ್ರಾ ರಸ್ತೆಗೆ ಟ್ರಕ್ ಹಾಗೂ ದ್ವಿ-ಚಕ್ರ ವಾಹನದ ನಡುವೆ ಆದ ಅಪಘಾತದಲ್ಲಿ ಕಸ್ತೂರಿಬಾಯಿ ಮೃತಪಟ್ಟಿದ್ದಳು. ಈ ಕುರಿತು ಪೋಲಿಸರು ತನ್ನ ಹಾಗೂ ಚಾಸಾ-5 ರವರ ಸಮಕ್ಷಮ ನಿಶಾನೆ ಪಿ-10 ರಿಂದ 12 ರಂತೆ ಸ್ಥಳ ಪಂಚನಾಮೆ ಮಾಡಿ ಮೋಟಾರ್ ಸೈಕಲ್ ಹಾಗೂ ಟ್ರಕ್ ಜಪ್ತಿಪಡಿಸಿಕೊಂಡು, ಪಂಚನಾಮೆ ಬರೆದು, ಓದಿ ಹೇಳಿ, ತನ್ನ ಸಹಿ ಪಡೆದುಕೊಂಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 7 ಪ್ರಾಸಾ-03 ಲಕ್ಷ್ಮಿಪುತ್ರ ಜಿಡಗಿ ತಂದೆ ಶಿವಲಿಂಗಪ್ಪ, ಇವರು ತಮ್ಮ ಸಾಕ್ಷ್ಯದಲ್ಲಿ ಮೃತ ಕಸ್ತೂರಿಬಾಯಿ ಗೊತ್ತು. ದಿನಾಂಕಃ 27.01.2017 ರಂದು ಮಾಶಾಳ-ಹೈದ್ರಾ ರಸ್ತೆಯಲ್ಲಿ ಅಪಘಾತವಾಗಿದ್ದು ಅವರು ಮೃತಪಟ್ಟಿರುತಾರೆ. ಅಲ್ಲಿಗೆ ಹೋಗಿ ನೋಡಲಾಗಿ ಮೋಟಾರ್ ಸೈಕಲ್ ಹಾಗೂ ಲಾರಿ ನಡುವೆ ಅಪಘಾತವಾಗಿದ್ದು ತನ್ನ ಹಾಗೂ ಚಾಸಾ-4 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆಂದು ಹಾಗೂ ತನಗೆ ಒಂದು ಘಟನಾ ಸ್ಥಳದ ಹಾಗೂ ಎರಡು ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಗಳನ್ನು ಈಗಾಗಲೇ ನಿಶಾನೆ ಪಿ-10 ರಿಂದ 12 ಎಂದು ಅದರ ಮೇಲಿನ ಸಹಿಗಳನ್ನು ನಿಶಾನೆ ಪಿ-10(ಬಿ) ರಿಂದ 12(ಬಿ) ಎಂದು ಗುರುತಿಸಿದ್ದು, ತಾನು ಅಪಘಾತಕ್ಕೀಡಾದ ವಾಹನದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಶಾನೇ ಪಿ-1 ರಿಂದ 8 ಎಂದು ಗುರುತಿಸಿರುವುದಾಗಿ ಮತ್ತು ಒಂದು ಪಂಚನಾಮೆಯನ್ನು ಘಟನಾ ಸ್ಥಳದಲ್ಲಿ ಮಾಡಿದ್ದು ಮತ್ತೊಂದು ಠಾಣೆಯಲ್ಲಿ ಮಾಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 8 ಪ್ರಾಸಾ-04 ಶ್ರೀಮಂತ ತಂದೆ ಈರಣ್ಣ ರೂಗಿ, ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ಮತ್ತು ಮೃತ ಕಸ್ತೂರಿಬಾಯಿ ಗೊತ್ತು. ದಿನಾಂಕಃ 17.01.2017 ರಂದು ಮಾಶಾಳ-ಹೈದ್ರಾ ರಸ್ತೆಯಲ್ಲಿ ಹಿಪ್ಪರಗಿ ರವರ ಹೊಲದ ಹತ್ತಿರ ತಾನು ಮಾತನಾಡುತ್ತಾ ನಿಂತಾಗ ಅಪಘಾತವಾಗಿದ್ದು ಕಸ್ತೂರಿಬಾಯಿ ಮೃತಪಟ್ಟಿರುತ್ತಾರೆ. ಆರೋಪಿತನು ತನ್ನ ಲಾರಿಯನ್ನು ಮಾಶಾಳ ಕಡೆಯಿಂದ ಚಲಾಯಿಸಿಕೊಂಡು ಬಂದು ರಸ್ತೆಯಲ್ಲಿರುವ ತಗ್ಗನ್ನು ತಪ್ಪಿಸಲು ಹೋಗಿ ಮೃತ ಕಸ್ತೂರಿಬಾಯಿಗೆ ಹಾಗೂ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಸಿರುತ್ತಾನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 9 ಪ್ರಾಸಾ-04 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಅಪಘಾತವಾದ ನಂತರ ಮೃತ ಕಸ್ತೂರಿಬಾಯಿ ರವರನ್ನು ಅಕ್ಕಲಕೋಟದ ಆಸ್ಪತ್ರೆಯಲ್ಲಿ ದಾಖಲು ಮಾಡಿದ್ದು, ಅಪಘಾತವು ಆರೋಪಿತನ ತಪ್ಪಿನಿಂದ ಆಗಿರುತ್ತದೆ. ಈ ಘಟನೆ ಕುರಿತು ಹೇಳಿಕೆ ನೀಡಿರುತ್ತೇನೆಂದು ಹಾಗೂ ಆರೋಪಿತನ ಹೆಸರು ಸೈಪನ ಬಂದರವಾಡ ಎಂದು ಠಾಣೆಗೆ ಕರೆಸಿದಾಗ ಗೊತ್ತಾಗಿರುತ್ತದೆ. ಈ ಬಗ್ಗೆ ಪುರವಣಿ ಹೇಳಿಕೆ ನೀಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 10 ಪ್ರಾಸಾ-05 ಪ್ರಕಾಶ ಗೌಂಡಿ ತಂದೆ ದೌಲತ್, ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ಗೊತ್ತು. ಮೃತ ಕಸ್ತೂರಿಬಾಯಿ ತನ್ನ ಸಂಬಂಧಿ. ಆರೋಪಿ ಗೊತ್ತು. ದಿನಾಂಕಃ 27.01.2017 ರಂದು ಚಾಸಾ-1 ರವರು ಮೃತ ಕಸ್ತೂರಿಬಾಯಿ ರವರನ್ನು ಹೈದ್ರಾದ ಖಾಜಾಸಾಬ ದರ್ಗಾಕ್ಕೆ ಹೋಗುತ್ತಿದ್ದಾಗ ಅಂದಾಜು 11-30 ಗಂಟೆಗೆ ಮೋಟಾರ್ ಸೈಕಲ ನಂ.ಎಂ.ಹೆಚ್13-ಬಿಜೆ-0609 ರ ಮೇಲೆ ಹೋಗುತ್ತಿದ್ದಾಗ ಈರಣ್ಣ ಹಿಪ್ಪರಗಿ ರವರ ಹೊಲದ ಹತ್ತಿರ ಮೂತ್ರ ವಿಸರ್ಜನೆಗೆಂದು ರಸ್ತೆಯ ಪಕ್ಕದಲ್ಲಿ ಮೋಟಾರ್ ಸೈಕಲ್ ನಿಲ್ಲಿಸಿದ್ದು ಅದೇ ಸಮಯದಲ್ಲಿ ಆರೋಪಿತನು ಮಾಶಾಳದಿಂದ ಹೈದ್ರಾ ಕಡೆಗೆ ಕೆಎ-32-7392 ನೇದ್ದರ ಲಾರಿಯನ್ನು ಅತಿ ವೇಗ ಹಾಗೂ ನಿರ್ಲಕ್ಷತನದಿಂದ ಚಲಾಯಿಸಿ ರಸ್ತೆ ಪಕ್ಕದಲ್ಲಿ ನಿಂತಿದ್ದ ಕಸ್ತೂರಿಬಾಯಿ ಹಾಗೂ ಮೋಟಾರ್ ಸೈಕಲಕ್ಕೆ ಡಿಕ್ಕಿಪಡಿಸಿ ವಾಹನವನ್ನು ಅಲ್ಲೇ ಬಿಟ್ಟು ಓಡಿ ಹೋಗಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 11 ಪ್ರಾಸಾ-05 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸದರಿ ಅಪಘಾತದಲ್ಲಿ ಮೃತ ಕಸ್ತೂರಿಬಾಯಿಯ ಎರಡು ಕಾಲುಗಳು, ಹೊಟ್ಟೆ ಹಾಗೂ ತಲೆಗೆ ಭಾರಿ ಒಳಪೆಟ್ಟಾಗಿದ್ದು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮರಣ ಹೊಂದಿರುವ ಬಗ್ಗೆ ತನಗೆ ಚಾಸಾ-9 ರವರು ತಿಳಿಸಿರುತ್ತಾರೆಂದು ಹಾಗೂ ತಾನು ಘಟನಾ ಸ್ಥಳಕ್ಕೆ ಹೋಗಿ ನೋಡಲಾಗಿ ಕಸ್ತೂರಿಬಾಯಿ

ರವರಿಗೆ ಭಾರಿ ರಕ್ತಗಾಯವಾಗಿ ಮೃತಪಟ್ಟಿರುತ್ತಾಳೆಂದು ಹಾಗೂ ಈ ಘಟನೆ ಕುರಿತು ತಾನು ಹೇಳಿಕೆ ನೀಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 12 ಪ್ರಾಸಾ-06 ಶ್ರೀಮತಿ ಅಂಬಿಕಾ ಗಂಡ ಕಾಶಿನಾಥ, ಇವರು ತಮ್ಮ ಸಾಕ್ಷ್ಯದಲ್ಲಿ ಈಗ್ಗೆ ಸುಮಾರು 8 ವರ್ಷಗಳ ಹಿಂದೆ ಬೆಳಗ್ಗೆ 11-00 ಗಂಟೆಗೆ ಹೈದ್ರಾ ಗ್ರಾಮಕ್ಕೆ ಹೋಗುತ್ತಿರುವಾಗ ರಸ್ತೆಯ ಪಕ್ಕದಲ್ಲಿ ನಿಂತಿದ್ದಾಗ ಸದರಿ ಆರೋಪಿ ಲಾರಿ ಚಾಲಕನು ಅತಿವೇಗ ಮತ್ತು ನಿಶ್ಕಾಳಜಿತನದಿಂದ ಲಾರಿಯನ್ನು ಚಲಾಯಿಸಿಕೊಂಡು ಬಂದು ತಮ್ಮ ಅತ್ತೆಗೆ ಡಿಕ್ಕಿ ಪಡಿಸಿ ಅಪಘಾತಪಡಿಸಿರುತ್ತಾನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 13 ಪ್ರಾಸಾ-06 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತದನಂತರ ತಮ್ಮ ಅತ್ತೆಯವರನ್ನು ಆಸ್ಪತ್ರೆಗೆ ಅಂತಾ ಅಕ್ಕಲಕೋಟಕ್ಕೆ ತೆಗೆದುಕೊಂಡು ಹೋಗುತ್ತಿರುವಾಗ ಮಾರ್ಗಮಧ್ಯ ತೀರಿಕೊಂಡಿರುತ್ತಾರೆಂದು ಹಾಗೂ ಚಾಸಾ-1 ರವರು ಸೈಫನ ಎನ್ನುವ ಲಾರಿ ಚಾಲಕನ್ನು ಅಪಘಾತಪಡಿಸಿರುತ್ತಾನೆ ಅಂತಾ ತಿಳಿಸಿರುತ್ತಾನೆ. ತದ ನಂತರ ಚಾಸಾ-1 ರವರು ಅಪಘಾತಪಡಿಸಿದ ಲಾರಿಯನ್ನು ಪೋಲಿಸ ಠಾಣೆಗೆ ತೆಗೆದುಕೊಂಡು ಹೋಗಿ ನಿಲ್ಲಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 14 ಪ್ರಾಸಾ-07 ಸಂಗಮೇಶ ಪಾಟೀಲ ತಂದೆ ಪರಗೌಡ ಪಿ.ಐ. ಇವರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ದಿನಾಂಕಃ 14.02.2017 ರಂದು ಚಾಸಾ-17 ರವರಿಂದ ಪಡೆದಿರುತ್ತೇನೆಂದು ಹಾಗೂ ಅದೇ ದಿನ ಚಾಸಾ-1 ರವರ ಮರು ಹೇಳಿಕೆ ಪಡೆದಿರುತ್ತೇನೆಂದು ಹಾಗೂ ಅದೇ ದಿನ ಚಾಸಾ-1 ರವರು ತೋರಿಸಿದ ಅಪಘಾತ ಸ್ಥಳದಲ್ಲಿ ಚಾಸಾ-4 ಮತ್ತು 5 ರವರ ಸಮಕ್ಷಮ ಗುನ್ನೆ ಸ್ಥಳದ ಪಂಚನಾಮೆ ಮಾಡಿರುತ್ತೇನೆಂದು ಹಾಗೂ ಅದೇ ದಿನ ಸದರಿ ಪಂಚರ ಸಮಕ್ಷಮ ಮೋಟಾರ್ ಸೈಕಲ ಜಪ್ತಿಪಡಿಸಿಕೊಂಡು ಚಾಸಾ-6 ರಿಂದ 11 ರವರ ಹೇಳಿಕೆ ಪಡೆದುಕೊಂಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 15 ಪ್ರಾಸಾ-07 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕಃ 18.02.2017 ರಂದು ಸಾಯಂಕಾಲ 07-00 ರಿಂದ 7-30 ರವರೆಗೆ ಚಾಸಾ-4 ಮತ್ತು 5 ರವರ ಸಮಕ್ಷಮ ಅಪಘಾತಪಡಿಸಿದ ಲಾರಿಯನ್ನು ಜಪ್ತಿಮಾಡಿ ಸದರಿ ವಾಹನದ ದಾಖಲೆಗಳನ್ನು ಪಡೆದುಕೊಂಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 16 ಪ್ರಾಸಾ-07 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕಃ 21.02.2017 ರಂದು ಆರೋಪಿತನಿಂದ ಇಂಡೆಮಿನಿಟಿ ಬಾಂಡ ಪಡೆದು ಲಾರಿ ಬಿಡುಗಡೆ ಮಾಡಿರುತ್ತೇನೆಂದು ಹಾಗೂ

ದಿನಾಂಕಃ 02.03.2017 ರಂದು ಚಾಸಾ-8 ರವರಿಂದ ಇಂಡಿಮಿನಿಟಿ ಬಾಂಡ ಪಡೆದು ಮೋಟಾರ ಸೈಕಲ ಬಿಡುಗಡೆ ಮಾಡಿರುತ್ತೇನೆಂದು ಹಾಗೂ ದಿನಾಂಕಃ 25.03.2017 ರಂದು ಆರ್.ಟಿ.ಓ ರವರಿಂದ ಎಂ.ವಿ ವರದಿ ಪಡೆದುಕೊಂಡು ನಂತರ ತನಿಖೆ ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ಸದರಿ ಆರೋಪಿತನ ವಿರುದ್ದ ಅಂತಿಮ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 17 ಪ್ರಾಸಾ-08 ಶ್ರೀನಿವಾಸ ತಂದೆ ರಾಮರಾವ ನಿವೃತ್ತ ಎ.ಎಸ್.ಐ. ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 13.02.2017 ರಂದು ತಾನು ಠಾಣಾ ಕರ್ತವ್ಯದಲ್ಲಿದ್ದಾಗ ಸಾಯಂಕಾಲ 05-00 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ಹೇಳಿಕೆ ಫಿರ್ಯಾದಿ ಸಾರಾಂಶದ ಮೇರೆಗೆ ಠಾಣೆ ಗುನ್ನೆ ನಂ.23/2017ನ್ನು ದಾಖಲಿಸಿಕೊಂಡಿದ್ದು, ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ತನ್ನ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 18 ಪ್ರಾಸಾ-08 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕಃ 14.02.2017 ರಂದು ಸಿ.ಪಿ.ಐ ಕಾರ್ಯಾಲಯಕ್ಕೆ ಭೇಟಿಕೊಟ್ಟು ಮುಂದಿನ ತನಿಖೆಗಾಗಿ ಕಡತಗಳನ್ನು ಚಾಸಾ-18 ರವರಿಗೆ ನೀಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ-19 ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ

ಪ್ರ-20 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಚಿಸುವಿರಾ?

ಉಃ

(ಆರೋಪಿತನ/ರ ಹೇಳಿಕೆಯನ್ನು ಆರೋಪಿತರಿಗೆ/ನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ/ನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿನಾಂಕಃ 04.11.2025

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಅಫಜಲಪೂರ.